# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : | 64(591) |
| ಸದಸ್ಯರ ಹೆಸರು : | ಶ್ರೀ ಹೆಚ್. ಎಸ್. ಗೋಪಿನಾಥ್(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ: | 08.12.2023 |
| ಉತ್ತರಿಸುವವರು : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

******

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ದಿನಾಂಕ:18.10.2021 ರಂದು ಹೊರಡಿಸಿರುವ ಜಂಟಿ ಸುತ್ತೋಲೆಯ ಪ್ರಕಾರ ಗ್ರಾಮ ಠಾಣೆ ವ್ಯಾಪ್ತಿಯಲ್ಲಿರುವ ಸ್ವತ್ತುಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ 9 ಮತ್ತು 11ಎ ಗಳನ್ನು ನೀಡಲು ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಾರ್ವಜನಿಕರಿಗೆ ನಿಗಧಿತ ಸಮಯಯೊಳಗೆ ನಮೂನೆ 9/11ಎ ಸೇವೆಯನ್ನು ಒದಗಿಸಲು ಸಾರ್ವಜನಿಕರ ಆಸ್ತಿಯು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಬಗ್ಗೆ ಅಳತೆ ಮಾಡಿಸುವ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಿ, ಸಾರ್ವಜನಿಕರಿಗೆ ನಿಗಧಿತ ಸಮಯದೊಳಗೆ ಸೇವೆಯನ್ನು ಒದಗಿಸುವ ಉದ್ದೇಶದಿಂದ ದಿಶಾಂಕ್ ಆಪ್ ಮೂಲಕ ನಿರ್ವಹಿಸಲು ಕ್ರಮಕೈಗೊಳ್ಳಲು ದಿನಾಂಕ:18.10.2021 ರಂದು ಜಂಟಿ ಸುತ್ತೋಲೆಯನ್ನು ಮತ್ತು ದಿನಾಂಕ:19.08.2023 ರಂದು ಪರಿಷ್ಕೃತ ಜಂಟಿ ಸುತ್ತೋಲೆಯನ್ನು ಹೊರಡಿಸಲಾಗಿದೆ.<br><br>ಅದರಂತೆ, ಪ್ರಾಯೋಗಿಕವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ 152 ಗ್ರಾಮ ಪಂಚಾಯತಿಗಳಲ್ಲಿ ಸವಿವರ test ಮಾಡಿ ಯಶ್ವಸಿಯಾಗಿ ಅನುಷ್ಠಾನಗೊಳಿಸಲಾಗಿದೆ. ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸುವ ವೇಳೆ ತಾಂತ್ರಿಕ ಸಮಸ್ಯೆಗಳು ಉಂಟಾಗಿದ್ದು, ಅಂತಹ ಸಮಸ್ಯೆಗಳನ್ನು ಕಾಲಕಾಲಕ್ಕೆ ಬಗೆಹರಿಸಿ, ಬಂದಂತಹ ಸಲಹೆಗಳನ್ನು ಸಂಯೋಜಿಸಲಾಗಿದೆ.<br><br>ಪ್ರಾಯೋಗಿಕವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ 152 ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಿದ ಆಧಾರ ಮೇಲೆ ಉಳಿದ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಲು ತಯಾರಿದ್ದು, ಎನ್.ಐ.ಸಿ ರವರು ತಿಳಿಸಿರುವಂತೆ, ಇ-ಸ್ವತ್ತು ತಂತ್ರಾಂಶದ version ಅನ್ನು ಉನ್ನತೀಕರಣಗೊಳಿಸುವವರೆಗೆ ಉಳಿದ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಿರುವುದಿಲ್ಲ ಎಂದು ತಿಳಿಸಿರುತ್ತಾರೆ.<br><br>ಇ-ಸ್ವತ್ತು ತಂತ್ರಾಂಶದ version ಅನ್ನು ಉನ್ನತೀಕರಣಗೊಳಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಇ-ಸ್ವತ್ತು ತಂತ್ರಾಂಶವನ್ನು ಉನ್ನತೀಕರಣಗೊಳಿಸಿದ ನಂತರ ದಿನಾಂಕ:18.10.2023 ರಂದು ಹೊರಡಿಸಲಾದ ಜಂಟಿ ಸುತ್ತೋಲೆಯಂತೆ, ಉಳಿದ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಲಾಗುವುದು. |

...2

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಬಂದಿದ್ದಲ್ಲಿ, ಸದರಿ ತೊಂದರೆಯನ್ನು ನಿವಾರಣೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ: (ವಿವರ ನೀಡುವುದು): | ಪ್ರಾಯೋಗಿಕವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ 152 ಗ್ರಾಮ ಪಂಚಾಯತಿಗಳಲ್ಲಿ ಸವಿವರ test ಮಾಡಿ ಯಶ್ವಸಿಯಾಗಿ ಅನುಷ್ಠಾನಗೊಳಿಸಲಾಗಿದೆ. ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸುವ ವೇಳೆ ತಾಂತ್ರಿಕ ಸಮಸ್ಯೆಗಳು ಉಂಟಾಗಿದ್ದು, ಅಂತಹ ಸಮಸ್ಯೆಗಳನ್ನು ಕಾಲಕಾಲಕ್ಕೆ ಬಗೆಹರಿಸಿ, ಬಂದಂತಹ ಸಲಹೆಗಳನ್ನು ಸಂಯೋಜಿಸಲಾಗಿದೆ.<br><br>ಪ್ರಾಯೋಗಿಕವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ 152 ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಿದ ಆಧಾರ ಮೇಲೆ ಉಳಿದ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಲು ತಯಾರಿದ್ದು, ಎನ್.ಐ.ಸಿ ರವರು ತಿಳಿಸಿರುವಂತೆ, ಇ-ಸ್ವತ್ತು ತಂತ್ರಾಂಶದ version ಅನ್ನು ಉನ್ನತೀಕರಣಗೊಳಿಸುವವರೆಗೆ ಉಳಿದ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಿರುವುದಿಲ್ಲ ಎಂದು ತಿಳಿಸಿರುತ್ತಾರೆ.<br><br>ಇ-ಸ್ವತ್ತು ತಂತ್ರಾಂಶದ version ಅನ್ನು ಉನ್ನತೀಕರಣಗೊಳಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಇ-ಸ್ವತ್ತು ತಂತ್ರಾಂಶವನ್ನು ಉನ್ನತೀಕರಣಗೊಳಿಸಿದ ನಂತರ ದಿನಾಂಕ:18.10.2023 ರಂದು ಹೊರಡಿಸಲಾದ ಜಂಟಿ ಸುತ್ತೋಲೆಯಂತೆ, ಉಳಿದ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಲಾಗುವುದು. |
| ಇ) | ಸದರಿ ಸುತ್ತೋಲೆಯಲ್ಲಿ ವಿವರಿಸಿರುವಂತೆ, ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ದಿನಾಂಕ್ ಆಪ್ ಗ್ರಾಮಾ ಠಾಣ ಸ್ವತ್ತುಗಳಿಗೆ ನಕ್ಷೆ ತಯಾರಿಸಲು ತರಬೇತಿ ನೀಡಲಾಗಿದೆಯೆ: | ಚಿಕ್ಕಬಳ್ಳಾಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಗಳಿಗೆ ತರಬೇತಿಯನ್ನು ನೀಡಲಾಗಿದೆ ಹಾಗೂ ಉಳಿದ ಜಿಲ್ಲೆಗಳಿಗೆ ದಿನಾಂಕ:30.09.2022 ಮತ್ತು ದಿನಾಂಕ:01.10.2022 ರಂದು ಎರಡು ಸುತ್ತಿನ ತರಬೇತಿಯನ್ನು ನೀಡಲಾಗಿದೆ. |
| ಈ) | ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಸರ್ಕಾರದಿಂದ ಕೈಗೊಳ್ಳ ಲಾಗುತ್ತಿರುವ ಪರ್ಯಾಯ ಕ್ರಮಗಳೇನು: | ಸಾರ್ವಜನಿಕರು ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 /11ಎ ಪಡೆಯಲು ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸುತ್ತಿದ್ದಾರೆ. ಗ್ರಾಮ ಪಂಚಾಯತಿ ರವರು ವಹಿವಾಟಿಗೆ ಒಳಪಟ್ಟ ಸದರಿ ಆಸ್ತಿಯು ಗ್ರಾಮ ಠಾಣದ ಒಳಗೆ ಬರುತ್ತದೆ ಇಲ್ಲವೆ ಎಂಬುದನ್ನು ಖಾತರಿಪಡಿಸಿಕೊಳ್ಳಲು, ಮೋಜಿನಿ ತಂತ್ರಾಂಶಕ್ಕೆ ಆನ್-ಲೈನ್ ಅರ್ಜಿಯನ್ನು ಸಲ್ಲಿಸುತ್ತಾರೆ. ಅರ್ಜಿದಾರರು ಅರ್ಜಿ ಶುಲ್ಕ ರೂ. 800/- ಪಾವತಿಸಿದ ನಂತರ ಭೂಮಾಪಕರು ಸ್ಥಳಕ್ಕೆ ಭೇಟಿ ನೀಡಿ ಅಳತೆ ಮಾಡಿ ಸದರಿ ಆಸ್ತಿಯು ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಬಗ್ಗೆ ದಾಖಲೆಗಳೊಂದಿಗೆ ಮಾಹಿತಿಯನ್ನು ಮೋಜಿನಿ ತಂತ್ರಾಂಶದ ಮೂಲಕ ಗ್ರಾಮ ಪಂಚಾಯತಿಗೆ ಸಲ್ಲಿಸುತ್ತಾರೆ. ಸದರಿ ಪ್ರಕ್ರಿಯೆಯು ಚಾಲ್ತಿಯಲ್ಲಿದೆ. |

<table>
<tr><th>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಉ)</td><td>ದಿಶಾಂಕ್ ಆಪ್ ಮೂಲಕ ಇ-ಸ್ವತ್ತು ಮಾಡಿಕೊಳ್ಳಲು ಇದುವರೆವಿಗೂ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿಯನ್ನು ನೀಡುವುದು);</td><td>
<table>
<tr><th>ಜಿಲ್ಲೆ</th><th>ಗ್ರಾಮಠಾಣಾ</th><th>ಅನುಮೋದಿತ ಬಡಾವಣೆ ನಿವೇಶನ</th><th>ವಸತಿ ಯೋಜನೆಯಡಿ ಮಂಜೂರಾದ ನಿವೇಶನ</th><th>ಕೈಗಾರಿಕಾ ಉದ್ದೇಶಕ್ಕೆ ಪರಿವರ್ತಿಸಿದ ಜಮೀನು</th><th>ಅಪಾರ್ಟ್ಮೆಂಟ್</th><th>Building</th><th>ಇತರೆ</th><th>ನಮೂನೆ-9/11ಎ</th></tr>
<tr><td>ಚಿಕ್ಕಬಳ್ಳಾಪುರ</td><td>5227</td><td>8739</td><td>621</td><td>73</td><td>0</td><td>0</td><td>1353</td><td>16013</td></tr>
</table>
</td></tr>
</table>

ಸಂಖ್ಯೆ: ಗ್ರಾಅಪ/164/ಇ-ಆಡಳಿತ/2023

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.